

ಒಂದು ನದಿಯ ತಟದಲ್ಲಿ ದೊಡ್ಡದೊಂದು ಜಂಬೂ ನೇರಳೆಯ ಮರವಿತ್ತು. ಆ ಮರದ ತುಂಬಾ ಗೊಂಚಲು ಗೊಂಚಲಾಗಿ ನೇರಳೆ ಹಣ್ಣುಗಳು ಮಾಗಿದ್ದವು. ಒಂದು ಮಂಗ ಆ ಮರ ಹತ್ತಿ, ಹಣ್ಣುಗಳನ್ನು ಕೊಯ್ದು ತಿನ್ನುತ್ತಿರಬೇಕಾದರೆ, ಮೊಸಳೆಯೊಂದು ನೀರಿನಲ್ಲಿ ಈಜಾಡುತ್ತಾ ಮರದಡಿಗೆ ಬಂದು, ಮೇಲಕ್ಕೆ ನೋಡಿತು. ಮಂಗ ಆ ಮೊಸಳೆಯನ್ನು ನೋಡಿ, ಎರಡು ಹಣ್ಣು ಕಿತ್ತು ಕೆಳಗೆ ಹಾಕಿತು. ಮೊಸಳೆ ಅದನ್ನು ತಿಂದಿತು, ಬಹಳ ರುಚಿ ಆಯಿತು. ಬರೀ ಕಪ್ಪೆ, ನೀರುಹಾವು, ಮೀನುಗಳನ್ನು ತಿಂದು ಜಡ್ಡುಗಟ್ಟಿದ ನಾಲಗೆಗೆ ಹಣ್ಣಿನ ರುಚಿ ಹತ್ತಿತು. ಇನ್ನೆರಡು ಕೊಡು ಅಂತ ಮಂಗನನ್ನು ಬೇಡಿಕೊಂಡಿತು. ಬೇಕಾದಷ್ಟು ಹಣ್ಣು ಮರದಲ್ಲಿತ್ತು, ಇನ್ನಷ್ಟು ಹಣ್ಣುಗಳನ್ನು ಕೊಯ್ದು ಹಾಕಿತು ಮಂಗ. ಹೀಗೆ ಮಂಗವೂ ಮೊಸಳೆಯೂ ಮಿತ್ರರಾದರು.

ಮೊಸಳೆ ದಿನಾ ಜಂಬೂ ನೇರಳೆ ಹಣ್ಣುಗಳನ್ನು ತಿನ್ನುತ್ತಿತ್ತು. ಹೀಗಿರುತ್ತಾ ಮೊಸಳೆ ಒಂದು ದಿನ ನಾಲ್ಕು ಹಣ್ಣುಗಳನ್ನು ಕೊಂಡುಹೋಗಿ ತನ್ನ ಹೆಂಡತಿಗೆ ಕೊಟ್ಟಿತು. ಮೊಸಳೆಯ ಹೆಂಡತಿಗೆ ನೇರಳೆ ಹಣ್ಣು ತುಂಬಾನೆ ರುಚಿಯಾಯಿತು. ಗಂಡನನ್ನು ಕೇಳಿತು, ಇದು ಎಲ್ಲಿ ಸಿಕ್ಕಿತು, ಏನು ಕತೆ ಎಂದು. ಮೊಸಳೆ ನಡೆದುದನೆಲ್ಲಾ ಸಾಂಗವಾಗಿ ಹೇಳಿತು, ಅದರ ಮಿತ್ರ ಮಂಗನನ್ನು ಹೊಗಳಿತು. ಆವಾಗ ಮೊಸಳೆಯ ಹೆಂಡತಿ ಹೇಳಿತು, ಇಷ್ಟು ರುಚಿಯ ನೇರಳೆ ಹಣ್ಣು ದಿನಾ ತಿನ್ನುವ ಆ ಮಂಗನ ಹೃದಯ ಎಷ್ಟು ರುಚಿ ಇರಲಿಕ್ಕಿಲ್ಲ? ನನಗೆ ನೀವು ಆ ಮಂಗನ ಹೃದಯ ತಂದು ಕೊಡಬೇಕು, ಎಂದು ಹಟ ಕಟ್ಟಿತು. ಮೊಸಳೆ ಹೆಂಡತಿಗೆ ನಾನಾ ಬಗೆಯಲ್ಲಿ ಹೇಳಿದರೂ, ಕೇಳಲೇ ಇಲ್ಲ ಹೆಂಡತಿ. ನಾನು ಹೋಗಿ ಹಾಳು ಬಾವಿಯಲ್ಲಿ ಬಿದ್ದು ಸಾಯುತ್ತೇನೆ ಎಂದು ಹೆದರಿಸಿತು. ಕಡೆಗೆ ಮೊಸಳೆ ಒಪ್ಪಿತು, ಆದರೆ ಮರದ ಮೇಲಿರುವ ಮಂಗನ ಹೃದಯ ಹೇಗೆ ತರುವುದು? ಅದಕ್ಕೆ ಹೆಂಡತಿ ಉಪಾಯ ಹೇಳಿತು, ನೀವು ಮಂಗನನ್ನು ಮನೆಗೆ ಔತಣಕ್ಕೆ ಕರೆಯಿರಿ, ಎಂದು. ಹೂಂ ಎಂದು, ಮರುದಿನ ಮೊಸಳೆ

ಮಂಗನನ್ನು ಕರೆತರಲು ಹೋಗುತ್ತದೆ. ಹೋಗಿ ಮಂಗನಲ್ಲಿ ಹೇಳುತ್ತದೆ, ನೀನು ದಿನಾಲೂ ಹಣ್ಣು ಕೊಡುತ್ತಿಯಾ, ಬದಲಾಗಿ ನಾನೇನು ಕೊಟ್ಟಿದ್ದೇನೆ ನಿನಗೆ? ಹಾಗೆ ಇವತ್ತು ನನ್ನ ಹೆಂಡತಿ ನಿನ್ನನ್ನು ಮನೆಗೆ ಕರೆದಿದ್ದಾಳೆ ಊಟಕ್ಕೆ, ಬಾ ಹೋಗೋಣ, ಎಂದಿತು ಮೊಸಳೆ. ಆಗ ಮಂಗ, ನನಗೆ ಈಜು ಬಾರದು, ಅದರಲ್ಲೂ ನಿಮ್ಮ ಮನೆ ನೀರೊಳಗೆ ಇರಬಹುದು, ಹೇಗೆ ಬರಲಿ? ಎಂದು. ಮೊದಲೆ ಹೇಳಿತು, ಅದಕ್ಕೆಲ್ಲಾ ತಲೆ ಬಿಸಿ ಮಾಡಬೇಡ,ನನ್ನ ಬೆನ್ನ ಮೇಲೆ ಕುಳಿತುಕೋ, ನಮ್ಮ ಮನೆ ಅನತಿ ದೂರದಲ್ಲಿ ಕುದುರಿ (ಸಣ್ಣ ದ್ವೀಪ)ನಲ್ಲಿ ಇರುವುದು, ಹೋಗುವ ಎಂದು. ಹಾಗಾಗಿ ಮಂಗ ಹಾರಿ ಮೊಸಳೆಯ ಬೆನ್ನಲ್ಲಿ ಕುಳಿತಿತು, ಮೊಸಳೆ ಈಜುತ್ತಾ ಹೋಯಿತು. ನದಿಯ ಮಧ್ಯಕ್ಕೆ ಬಂದಾಗ ಮೊಸಳೆ

ಹೇಳುತ್ತದೆ, ನಿನ್ನನ್ನು ಈಗ ಕರೆದುಕೊಂಡು
ಹೋಗುತ್ತಿರುವುದು ಊಟಕ್ಕಲ್ಲ, ನನ್ನ ಹೆಂಡತಿಗೆ ನಿನ್ನ
ಹೃದಯ ತಿನ್ನಬೇಕಂತೆ, ಅದಕ್ಕೆ ಎಂದು. ಈಗ ಮಂಗ,
ಮಂಗನಾದನೇ (ಮೋಸ ಹೋದೆನೇ), ಏನು ಮಾಡಲಿ?
ಎಂದು ಯೋಚಿಸಿತು. ಮೊಸಳೆಗೆ ಹೇಳಿತು, ಛೇ ಎಂತಹ
ಕೆಲಸವಾಯಿತು, ನೀನು ಮೊದಲೇ ಹೇಳಬೇಕಾಗಿತ್ತಲ್ಲ,
ಹೃದಯ ತಿನ್ನಲಿಕ್ಕಿದೆ ಎಂದು. ಹೃದಯ ನಾನು
ಮರದಲ್ಲಿಯೇ ಬಿಟ್ಟು ಬಂದಿದ್ದೇನೆ. ಆಗ ಮೊಸಳೆ,
ಹಾಗಾದರೆ ಹೋಗಿ ತಗೊಂಡು ಬರೋಣ ಎಂದಿತು.
ಹಾಂ ಎಂದು ಹಿಂದಕ್ಕೆ ಬರುತ್ತವೆ, ಮಂಗ ತಬಕ್ಕನೆ ಹಾರಿ
ಮರದ ಮೇಲೇರಿ, ಮೊಸಳೆಗೆ ಟಾಟಾ ಹೇಳಿತು.
ಇನ್ನುಮೇಲೆ ನನ್ನ ದಾರಿ ನನಗೆ, ನಿನ್ನ ದಾರಿ ನಿನಗೆ,
ಎಂದಿತು.
ಹಾಗೆ, ಆಪತ್ಕಾಲದಲ್ಲಿ ನಮ್ಮ ರಕ್ಷಣೆಗೆ ಬರುವುದು ನಮ್ಮ
ಬುದ್ಧಿಮತ್ತೆ.